ಕಾಡುತ್ತಿತ್ತು. ಒಂಟಿತನವೇ ಸಂಗಾತಿಯಾಗಿತ್ತು.

ವಿಜಯಮ್ಮ ಮತ್ತು ಪ್ರಭಾಕರರಾಯರ ನಡುವಿನ ಸಂಬಂಧವೂ ಸಹಜವಾಗಿರದೇ, ಯಾವುದೋ ಅವ್ಯಕ್ತ ಕಂದರ ಅವರಿಬ್ಬರ ನಡುವೆ ಬಾಯ್ತೆರೆದು ನಿಂತಂತೆ ಭಾಸವಾಗಿತ್ತು. ಇದೇ ಕಾರಣಕ್ಕೆ ರಾಯರು ಹೆಚ್ಚಾಗಿ ಹೊರಗೇ ಇರಲು ಬಯಸುತ್ತಿದ್ದರೇನೋ..! ಊಟ, ತಿಂಡಿ, ತೀರಾ ಅನಿವಾರ್ಯವಾಗಿರುವಾಗ ಮಾತ್ರ ಅವರಿಬ್ಬರ ನಡುವೆ ಚುಟುಕಾಗಿ ಸಂಭಾಷಣೆ ನಡೆಯುತ್ತಿತ್ತು. ಏಕೆ ಹೀಗೆ..? ಎಷ್ಟೋ ಸಲ ಕೇಳಬೇಕೆಂಬ ಕುತೂಹಲ ಮೂಡಿದರೂ, ಈ ಮನೆಗೆ ತಾನು ಹೊರಗಿನವಳಾಗಿದ್ದರಿಂದ ಅದು ತನಗೆ ಸಂಬಧಿಸದ ವಿಚಾರವೆಂದು ಅಪೂರ್ವ ಅದನ್ನು ಕೆದಕುವ ಪ್ರಯತ್ನ ಮಾಡಿರಲಿಲ್ಲ. ಆದರೆ ಕೆಲವೊಮ್ಮೆ ವಿಜಯಮ್ಮನ ಮನಸ್ಥಿತಿ ತೀರಾ ಹದಗೆಟ್ಟು, ಜೋರಾಗಿ ಬಿಕ್ಕಳಿಸುವುದುಂಟು. ಆಗೆಲ್ಲಾ ಅಪೂರ್ವಳಿಗೆ ಭಯವಾಗುತ್ತಿತ್ತು. ಅದಕ್ಕಾಗಿ, ಅಪೂರ್ವ ಅವರ ವೈಯುಕ್ತಿಕ ವಿಚಾರಗಳಿಗೆ ಹಸ್ತಕ್ಷೇಪ ಮಾಡದೇ, ತಾನುಂಟು ತನ್ನ ಕೋಣೆಯುಂಟು ಎನ್ನುವಂತೆ ಇರುತ್ತಿದ್ದಳು. ಹೇಗೂ ಇನ್ನೆರಡು ವರ್ಷಗಳಲ್ಲಿ ತಾನು ಈ ಮನೆ ತೊರೆದು ಹೋಗುವವಳು, ಕ್ಯಾಂಪಸ್ ಇಂಟರ್ವ್ಯೂ ನಲ್ಲಿ ಆಯ್ಕೆಯಾಗಿ ಎಲ್ಲಾದರೂ ನೌಕರಿ ದೊರೆತರೆ, ಎಲ್ಲಾದರೂ ಪಿ.ಜಿ. ಹುಡುಕಿ ಅಲ್ಲಿಗೆ ಹೋಗಿಬಿಡಬೇಕು ಎಂದೆಲ್ಲಾ ಲೆಕ್ಕಾಚಾರ ಹಾಕಿ, ಎಲೆಯ ಮೇಲಿನ ನೀರಿನ ಹನಿಯಂತೆ ಆ ಮನೆಗೆ ತಾಕಿಯೂ ತಾಕದವಳಂತೆ ಇದ್ದಳು. ಹಳ್ಳಿಯಲ್ಲಿ ಅವಳ ಒಂಟಿತನ ಕಳೆಯಲು ಸದಾ ತನ್ನ ಕೋಣೆಯಲ್ಲಿ ಅನಾಥೆಯಂತೆ ಹೊತ್ತು ಕಳೆಯಬೇಕಿತ್ತು. ತನ್ನ ಹೆತ್ತವರು ಈ ಪ್ರಪಂಚದಲ್ಲಿದ್ದಿದ್ದರೆ, ತನಗೆ ಎಲ್ಲೆಲ್ಲೋ ಇನ್ನೊಬ್ಬರ ಹಂಗಿನಲ್ಲಿ ಬದುಕಬೇಕಾದ ಪ್ರಮೇಯವೇ ಇರುತ್ತಿರಲಿಲ್ಲ ಎಂದು ತನ್ನ ದುರದೃಷ್ಟಕ್ಕೆ ಒಳಗೇ ಹಳಿದುಕೊಳ್ಳುತ್ತಿದ್ದಳು.

'ಏನಾಯ್ತು ಆಂಟಿ..?' ಅಪೂರ್ವ ಮತ್ತೆ ಕಳಕಳಿ ತೋರಿಸಿದಾಗ ವಿಜಯಮ್ಮ ನಿರಾಸಕ್ತಿಯಿಂದ, 'ಏನೂ ಇಲ್ವೇ..ನಿನ್ಗೆ ಕಾಲೇಜಿಗೆ ಹೊತ್ತಾಗ್ಲಿಲ್ವಾ..? ಒಲೆ ಉರಿ ಹಚ್ಚಿಲ್ಲ ಇವತ್ತು..ಗ್ಯಾಸ್ನಲ್ಲಿ ನೀರು ಕಾಯಿಸಿಕೊಡ್ತೀನಿ..ತಣ್ಣೀರು ಸ್ನಾನ ಮಾಡೋಕ್ಕೆ ಹೋಗ್ಬೇಡಾ.. ನಡೀ..ನಿನ್ಗೇನಾದ್ರೂ ತಿಂಡಿ ಮಾಡಿ ಕೊಡ್ತೀನಿ..' ಎನ್ನುತ್ತಲೇ ಎದ್ದವರಿಗೆ ತಲೆ ಸುತ್ತಿ ಬಂದಂತಾಗಿ ಹಾಗೇ ಹಿಂದೆ ವಾಲಿದರು. ಅಪೂರ್ವ ಅವರನ್ನು ಸಂಭಾಳಿಸದಿದ್ದರೆ ಕೆಳಗೆ ಬೀಳುತ್ತಿದ್ದರೇನೋ. ಅವರಿಗೆ ಆಸರೆ ನೀಡಿ ಹಾಗೇ ಮಂಚದ ಮೇಳೆ ಕೂರಿಸಿದಳು.

'ಆಂಟಿ..ರಾತ್ರೆಯೆಲ್ಲಾ ನಿದ್ದೆ ಇಲ್ದೇ ಕೂತಿದ್ರೇನೋ..ಅದಿಕ್ಕೇ ಹೀಗಾಗಿದೆ..ನೀವು ರೆಸ್ಟ್ ತಗೊಳ್ಳಿ..ನಾನು ನೋಡ್ಕೋತೀನಿ..'

'ಅಲ್ವೇ..ನಿನ್ಗೆ ಕಾಲೇಜು ಇದ್ಯಲ್ವಾ..' ಎಂದು ಚಿಂತೆ ವ್ಯಕ್ತಪಡಿಸಿದಾಗ, 'ಒಂದಿನ ಹೋಗ್ದೇ ಇದ್ರೆ ಏನೂ ಆಗಲ್ಲ..ನಿಮ್ಮ ಆರೋಗ್ಯ ಕೂಡಾ ನನ್ಗೆ ಅಷ್ಟೇ ಮುಖ್ಯ..! ಇರೀ ಕಾಫಿ ಮಾಡಿ ತರ್ತೀನಿ..ಅಂಕಲ್ ಬರುವ ಸಮಯ ಆಯ್ತು..' ಅವಳು ಅಡುಗೆ ಮನೆಗೆ ಹೋಗಿ ಲಗುಬಗನೆ ಕಾಫಿ ಬೆರೆಸಿ ವಿಜಯಮ್ಮನಿಗೆ ತಂದು ಕೊಟ್ಟಳು.

'ಮುಖಾನೂ ತೊಳೆದಿಲ್ವೇ..ಇರು ಬಂದೆ..' ವಿಜಯಮ್ಮ ಎದ್ದಾಗ ಅಪೂರ್ವಳೇ ಅವರ ಕೈ ಹಿಡಿದು ಬಚ್ಚಲು ಮನೆಯವರೆಗೂ ಕರೆದೊಯ್ದಳು. ವಿಜಯಮ್ಮನ ಮುಖದಲ್ಲಿ ಚಿಂತೆಯ ಮೋಡ ಮಾತ್ರ ಇನ್ನೂ ಕವಿದೇ ಇತ್ತು. ಕೋಣೆಗೆ ಬಂದು ಕುಡಿದ ಕಾಫಿಯ ಲೋಟ ಖಾಲಿಯಾದ ಪ್ರಜ್ಞೆಯೂ ಅವರಿಗಿರಲಿಲ್ಲ.

'ಆಂಟಿ.. ಲೋಟ ಖಾಲಿಯಾಗಿದೆ..ಇಲ್ಕೊಡಿ..' ಎಂದು ಅವರಿಂದ ಲೋಟ ಪಡೆದು ಅವರ ಕಾಲ ಬಳಿ ಕುಳಿತು, 'ಯಾಕೆ ..ಆಂಟಿ..ಏನಾಗಿದೆ..? ಯಾಕೆ ಹೀಗಿದ್ದೀರಾ..? ನಿದ್ದೆ ಕಳ್ಕೊಂಡು ಚಿಂತೆ ಮಾಡುವಂಥದ್ದು ಏನಾಗಿದೆ..?'

'ಏನೂ ಇಲ್ಲಾ ಅಪೂರ್ವ..ನೀನು ತಲೆ ಕೆಡಿಸಿಕೊಳ್ಳಬೇಡ' ಅವಳತ್ತ ಬಾರದ ನಗೆ ನಕ್ಕು ನುಡಿದರು.

'ಆಂಟಿ..ನನ್ಗೆ ನಿಮ್ಮ ಚಿಂತೆ ಇದೆ..ಅದಿಕ್ಕೇ ಕೇಳ್ತಾ ಇದ್ದೀನಿ..ಏನಾಗಿದೇಂತ ನನ್ಹತ್ರ ಹೇಳಿಕೊಳ್ಳಬಾರದೇ ..? ನಾನು ಈ ಮನೆಗೆ ಬಂದು ಮೂರು ವರ್ಷಗಳ ಮೇಲಾಯ್ತು..ಆಗಿಂದಲೂ ಗಮನಿಸ್ತಾ ಇದ್ದೀನಿ..ಯಾವುದೋ ಕೊರಗಿನಿಂದ ನೀವು ನಿತ್ಯ ವ್ಯಥೆ ಪಡ್ತಾ ಇರ್ತೀರಾ..ನಿಮ್ಮ ದುಃಖ ಹಂಚಿಕೊಂಡ್ರೆ..ನಿಮ್ಮ ಮನಸ್ಸು ಹಗುರವಾಗುತ್ತೆ..ನಾನು ನಿಮ್ಗೆ ಹೊರಗಿನವ್ಳೂಂತ ನನ್ಹತ್ರ ಹೇಳಿಕೊಳ್ಳುವುದಿಲ್ವಾ...?'

'ಹಾಗೇನೂ ಇಲ್ಲ ಅಪೂರ್ವ..ವಯಸ್ಸಾಯ್ತಲ್ವಾ..ಅದಿಕ್ಕೇ ಹೀಗೇ ಏನೋ ಆಗಿರಬಹುದು..ಬಿಡು..ಸರಿ ಹೋಗುತ್ತೆ..!'

'ನನ್ಹತ್ರ ಹೇಳಿಕೊಳ್ಳಲು ಆಗಲ್ಲಾ ಅಂದ್ರೆ..ನನ್ನನ್ನು ನೀವು ನಿಜವಾಗಿಯೂ ಪರಕೀಯಳಾಗಿ ಪರಿಗಣಿಸಿದ್ದೀರ ಎಂದಾಯಿತು..ಅದಿಕ್ಕೇ.. ನೀವು ನಿಮ್ಮ ಸಂಕಟ ಹೇಳಿಕೊಳ್ತಾ ಇಲ್ಲಾ..ಅಲ್ವಾ..? ನಾನು ಈ ಮನೆಗೆ ಬಂದಾಗಲಿಂದಲೂ ಗಮನಿಸ್ತಾ ಇದ್ದೀನಿ..ನಿಮ್ಮ ಮತ್ತು ಅಂಕಲ್ ಮಧ್ಯೆ ಏನೋ ಮನಸ್ತಾಪ ಇದೆ..ಇಬ್ರೂ ಏನೋ ನೋವಿನಿಂದ ಮೂಕ ವೇದನೆ ಅನುಭವಿಸ್ತಾ ಇದ್ದೀರಾ. .ನೀವು ಬಾಯ್ಬಿಟ್ಟು ಹೇಳದೇ ಹೋದ್ರೂ.. ನಿಮ್ಮ ಮೌನವೇ ನಿಮ್ಮ ಸಂಕಟವನ್ನು ವ್ಯಕ್ತಪಡಿಸುತ್ತೆ..ನಿಮ್ಮ ಅನ್ನ ತಿನ್ತಾ ಇದ್ದೀನಿ..ನಿಮ್ಮ ಋಣದಲ್ಲಿ ಬಾಳ್ತಾ ಇರುವ ನನ್ಗೆ..ನಿಮ್ಮ ಸಂಕಟದಲ್ಲಿ ಭಾಗಿಯಾಗುವ ಅರ್ಹತೆ ಇಲ್ವಾ..? ಅದೇನು ಅಂತ..ಇವತ್ತಾದರೂ ಹೇಳಿ ಆಂಟಿ..!' ಅಪೂರ್ವಳ ನಿವೇದನೆಗೆ ವಿಜಯಮ್ಮನ ಕಂಗಳಿಂದ ಮತ್ತೆ ಕಂಬನಿ ಧುಮುಕಿತು.

'ಅದನ್ನು ನಿನ್ಮುಂದೆ ಹೇಳಿಕೊಳ್ಳುವಂಥದ್ದಲ್ಲ ಕಂದಾ..ನೀನು ಅದನ್ನೆಲ್ಲಾ ಮನಸ್ಸಿಗೆ ಹಚ್ಕೋಬೇಡಾ..ಬಾ..ಕಾಲೇಜಿಗೆ ಹೊರಡು..ಸಾಯಂಕಾಲ ..ಇವತ್ತು ದೇವಸ್ಥಾನಕ್ಕೆ ಹೋಗ್ಬೇಕೂಂತ ನಿನ್ನ ಅಂಕಲ್ ಹೇಳಿದ್ದಾರೆ..ಬೇಗ ಬಂದ್ಬಿಡು..ಜೊತೆಗೆ ಹೋಗಿ ಬರೋಣಾ..!'

ವಿಜಯಮ್ಮ ಚೇತರಿಸಿಕೊಂಡು ಎದ್ದು ನಡೆದಾಗ ಅಪೂರ್ವ ಅವರನ್ನು ಕರೆದಳು, 'ಆಂಟಿ..!'

ವಿಜಯಮ್ಮ ನಿಂತಲ್ಲೇ ತಿರುಗಿ ಪ್ರಶ್ನಾರ್ಥಕ ನೋಟ ಬೀರಿದರು, 'ನೀವು ಕಡೆಗೂ ನನ್ಗೆ ನಿಮ್ಮ ನೋವು ಏನೂಂತ ಹೇಳಲೇ ಇಲ್ಲಾ..' ಎಂದಳು ವ್ಯಥೆಯಿಂದ.

ವಿಜಯಮ್ಮ ಮೌನವಾಗಿ ಅಲ್ಲಿಂದ ಹೆಜ್ಜೆ ಕಿತ್ತಿಟ್ಟರು.

ಅಪೂರ್ವಳ ಮನದಲ್ಲಿ ಎದ್ದ ಪ್ರಶ್ನೆಗೆ ಉತ್ತರ ದೊರಕದೇ ಹಾಗೇ ಉಳಿದುಹೋಗಿತ್ತು.

ಪ್ರಭಾಕರರಾಯರ ದಿವ್ಯ ಗಾಂಭೀರ್ಯ, ಮೌನದ ಹಿಂದೆಯೂ ಅದೇ ನೋವು ಮಡುಗಟ್ಟಿದೆಯೇ..? ಅಪೂರ್ವಳಿಗೆ ತಿಳಿದಿಲ್ಲ. ವಿಜಯಮ್ಮ ತಮ್ಮ ದೌರ್ಬಲ್ಯವನ್ನು ಅತ್ತು ಕರೆದು ಹೊರಗೆಡವುತ್ತಿದ್ದರು. ಆದರೆ ಪ್ರಭಾಕರ ರಾಯರ ಅಂತರಂಗವನ್ನು ಹೊಕ್ಕಲು ಅಪೂರ್ವಳಿಂದ ಆಗಿರಲಿಲ್ಲ. ರಾಯರೂ ಅದಕ್ಕೆ ಆಸ್ಪದ ನೀಡಿರಲಿಲ್ಲ. ವಿಜಯಮ್ಮನ ಆಗ್ರಹಕ್ಕೆ ಅಪೂರ್ವ ಕಾಲೇಜಿಗೆ ಅಣಿಯಾಗಿ ಬಂದಾಗ ರಾಯರು ವಾಕಿಂಗ್ ಮುಗಿಸಿ ಬಂದು ಪತ್ರಿಕೆ ಓದುತ್ತ ಕಾಫಿ ಹೀರುತ್ತಿದ್ದರು.

'ಅಪೂರ್ವ..ಸಂಜೆ ಬೇಗ ಬರ್ತಿಯಲ್ವಾ..? ದೇವಸ್ಥಾನಕ್ಕೆ ಹೋಗೋದಿದೆ..!' ಎಂದು ನೆನಪಿಸಿದರು.

'ಆಗ್ಲೀ ಅಂಕಲ್..ಬರ್ತೀನಿ..' ಅಪೂರ್ವ ವಿಧೇಯತೆಯಿಂದ ಉತ್ತರಿಸಿ ಮನೆಯಿಂದ ಹೊರಗಡಿಯಿಟ್ಟಳು.

* * *

ಲಕ್ಷ್ಮೀನರಸಿಂಹಸ್ವಾಮಿ ಪ್ರಭಾಕರರಾಯರ ಮನೆ ದೇವರು. ಅದೇ ದೇವರ ಆಲಯಕ್ಕೆ ತಿಂಗಳಿಗೊಮ್ಮೆ ಪರಿವಾರ ಸಮೇತ ಹೋಗಿ ಬರುವ ಪರಿಪಾಠವಿತ್ತು. ವಿಜಯಮ್ಮನಿಗೆ ಅಂಥ ಆಸಕ್ತಿ ಇರದಿದ್ದರೂ, ಪತಿಯ ಇಚ್ಛೆಗೆ ಎದುರಾಡಲಾಗದೇ ಅವರೊಂದಿಗೆ ಹೋಗಿ ಬರುತ್ತಿದ್ದರು. ಪ್ರಭಾಕರರಾಯರು ಶೆಡ್ಡಿನಿಂದ ಕಾರು ಹೊರ ತೆಗೆದು ಹಾರ್ನ್ ಮಾಡಿದರು.

'ನನ್ಗೆ ..ಏನೂ ಮನಸ್ಸಿಲ್ಲ ಅಪೂರ್ವ..ಆರೋಗ್ಯ ಬೇರೆ ಸರಿ ಇಲ್ಲಾ..ದೇವ್ರು ಮೊದ್ಲೇ ಹಣೆಬರಹವನ್ನು ಬರೆದಿಟ್ಟಿರ್ತಾನಲ್ವಾ..? ನಾವು ಹೋಗಿ ಏನು

## ಗುಲಾಬಿ

ಗುಲಾಬಿ ಹೂವು
ಬೇಡ ನನ್ನ ನಲ್ಲ
ಗುಲಾಬಿ ಬಣ್ಣದ
ನೋಟು ಕೊಡು
ಈ ಸಲ

★ ವಿ. ಹೇಮಂತಕುಮಾರ್



ವಿಜಯ